ನಂತರ ಈ ತರಹದ ಸೀರೆಗಳನ್ನು ಬಾಲಿವುಡ್ ನಟಿಯರಾದ ದೀಪಿಕಾ, ಕರೀನಾ ಮುಂತಾದವರು ತಾವು ಹೋಗುವ ಸಭೆ, ಸಮಾರಂಭಗಳಲ್ಲಿ ಧರಿಸಿ ಮಿಂಚಿ, ಅದನ್ನು ಸೋಷಿಯಲ್ ಮೀಡಿಯಾದಲ್ಲಿ ಹಾಕಿದ್ದೂ ಆಯಿತು.



## ಸುದೀರ್ಘ ಇತಿಹಾಸ

ಟಿಶ್ಯು ಸೀರೆಗಳ ಇತಿಹಾಸ ಭಾರತದಲ್ಲಿ ಮೊಘಲ್ ಯುಗದಲ್ಲಿ ಪ್ರಾರಂಭವಾಯಿತು. ಮೊಘಲ್ ಚಕ್ರವರ್ತಿಗಳು ಮತ್ತು ಅವರ ಆಸ್ಥಾನಿಕರು ತಮ್ಮ ವಿಶಿಷ್ಟ ಅಭಿರುಚಿಗಳಿಗೆ ಜವಳಿ ನೇಯ್ಗೆ ಸೇರಿದಂತೆ ಕಲೆಗಳ ಪೋಷಣೆಗೆ ಹೆಸರುವಾಸಿಯಾಗಿದ್ದರು. ಆರಂಭದಲ್ಲಿ ಉತ್ತರ ಭಾರತದ ರೇಷ್ಮೆ ನೇಯ್ಗೆ ಪರಂಪರೆಯಿರುವ ನಗರವಾದ ಬನಾರಸ್‌ನಲ್ಲಿ ಅಭಿವೃದ್ಧಿಪಡಿಸಲಾಯಿತು. ಬನಾರಸಿ ಟಿಶ್ಯು ರೇಷ್ಮೆ ಸೀರೆಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಪಡೆದಿವೆ.

ಆರಂಭಿಕ ದಿನಗಳಲ್ಲಿ, ಟಿಶ್ಯು ರೇಷ್ಮೆ ಸೀರೆಗಳನ್ನು ಶುದ್ಧ ರೇಷ್ಮೆಯನ್ನು ಬಳಸಿ ತಯಾರಿಸಲಾಗುತ್ತಿತ್ತು.

ಇದರ ಅಂದವನ್ನು ಹೆಚ್ಚಿಸಲು ಹೊಳೆಯುವ ಲೋಹದ ಎಳೆಗಳನ್ನು ನೇಯ್ಗೆಯಲ್ಲಿ ಸೇರಿಸಲಾಗುತ್ತಿತ್ತು. ಅಂದಿನ ಕಾಲದಲ್ಲಿ ಈ ಸೀರೆಗಳು ಬರೀ ಶ್ರೀಮಂತರ ಸ್ವತ್ತಾಗಿತ್ತು. ಇದೀಗ ಈ ಸೀರೆಗಳಿಗೆ ಬೇಡಿಕೆ ಹೆಚ್ಚಾದಂತೆ, ಹತ್ತಿ ಮತ್ತು ಪಾಲಿಯೆಸ್ಟರ್‌ನಂತಹ ಇತರ ನಾರುಗಳನ್ನು ಬಳಸಿ ಈ ತರಹದ ಟಿಶ್ಯು ರೇಷ್ಮೆ ಸೀರೆಗಳನ್ನು ತಯಾರಿಸಿ ಎಲ್ಲರಿಗೂ ಕೈಗೆಟುಕುವ ದರದಲ್ಲಿ ಮಾರುಕಟ್ಟೆಗೆ ತರಲಾಗಿದೆ.



ಇಂದು ಟಿಶ್ಯು ರೇಷ್ಮೆ ಸೀರೆಗಳು ಅವುಗಳ ಸೌಂದರ್ಯ ಮತ್ತು ಸೊಬಗಿಗಾಗಿ ಇನ್ನೂ ಹೆಚ್ಚು ಬೇಡಿಕೆಯಲ್ಲಿವೆ. ವಿವಿಧ ಶೈಲಿಗಳು, ಬಣ್ಣಗಳು ಮತ್ತು ವಿನ್ಯಾಸಗಳಲ್ಲಿ ತಯಾರಿಸಲಾಗುವ ಈ ಸೀರೆಗಳು ಭಾರತದ ಪ್ರತಿಯೊಂದು ಪ್ರದೇಶದಲ್ಲಿ ತನ್ನದೇ ಛಾಪು ಮೂಡಿಸುತ್ತಿವೆ. ಟಿಶ್ಯು ಸೀರೆಗಳು ತಮ್ಮ ರಾಯಲ್ ಲುಕ್‌ನಿಂದ ಎಲ್ಲರ ಗಮನ ಸೆಳೆಯುತ್ತಿದ್ದು, ಇತರ ರೀತಿಯ ಸೀರೆಗಳಿಗಿಂತ ಭಿನ್ನವಾಗಿ ಕಾಣುವಂತೆ ಮಾಡುವ ವಿಶೇಷ ಮತ್ತು ವಿಶಿಷ್ಟ ಗುಣಲಕ್ಷಣಗಳಿಗೆ ಹೆಸರುವಾಸಿಯಾಗಿದೆ.

## ಫ್ಯೂಷನ್ ಸೀರೆ

ಟಿಶ್ಯು ಸೀರೆಗಳ ಜೊತೆಗೆ ಫ್ಯೂಷನ್ ಸೀರೆಗಳು ಫ್ಯಾಷನ್ ಜಗತ್ತಿಗೆ ಎಂಟ್ರಿ ಕೊಟ್ಟಿರುವುದರಿಂದ ಮಹಿಳೆಯರಿಗೆ ಬಹು ಆಯ್ಕೆ ಸಿಕ್ಕಿದ ಹಾಗೆ ಆಗಿದೆ. ಇದರಲ್ಲಿ ತಿಳಿ ಬಣ್ಣಗಳು, ಗಾಢ ಬಣ್ಣ ಎರಡೂ ಶೈಲಿಯ ಸೀರೆಗಳಿದ್ದು ಸ್ಟೈಲಿಷ್ ಆಗಿ ಕಾಣಿಸಬೇಕೆನಿಸಿದವರಿಗೆ ಹೇಳಿ ಮಾಡಿಸಿದಂತಿದೆ. ಇದಕ್ಕೆ ಹೆಚ್ಚಿನ ಒಡವೆ ಹಾಕುವ ಅಗತ್ಯವೂ ಇಲ್ಲ. ಹಬ್ಬದ ನೆಪದಲ್ಲಿ ಖರೀದಿಸಿದ ಫ್ಯೂಷನ್ ಸೀರೆಗಳನ್ನು ಮದುವೆ ಮುಂಜಿಗಳಂತಹ ಶುಭ ಸಮಾರಂಭಗಳಲ್ಲೂ ಧರಿಸಬಹುದು. ಸದ್ಯ ಟ್ರೆಂಡ್‌ನಲ್ಲಿರುವ ಇಂಥ ಸೀರೆಗಳು ಶ್ರಾವಣದ ಸೊಬಗನ್ನು ಹೆಚ್ಚಿಸಲು ಕೂಡ ಸಹಕಾರಿ.

## ಸೀರೆಯ ಗುಣಲಕ್ಷಣಗಳು

- ಟಿಶ್ಯು ರೇಷ್ಮೆ ಸೀರೆಗಳನ್ನು ಚಿನ್ನ ಅಥವಾ ಬೆಳ್ಳಿಯಂತಹ ದಾರಗಳಲ್ಲಿ ನೇಯ್ಗೆ ಮಾಡುವ ಮೂಲಕ ಸೀರೆಗಳಿಗೆ ಹೊಳಪನ್ನು ನೀಡಲಾಗುತ್ತದೆ. ಇದು ರಾಯಲ್ ಲುಕ್ ನೀಡುತ್ತದೆ.
- ಈ ಮಾದರಿಯ ಸೀರೆಗಳನ್ನು ಸೂಕ್ಷ್ಮ ಮತ್ತು ತೆಳುವಾದ ದಾರಗಳಿಂದ ತಯಾರಿಸಲಾಗುತ್ತದೆ. ಇದು ಅವುಗಳಿಗೆ ಹಗುರ ಮತ್ತು ಅತ್ಯಂತ ಸುಂದರ ವಿನ್ಯಾಸವನ್ನು ನೀಡುತ್ತದೆ. ಇದು ಬಿಸಿ ಮತ್ತು ಆರ್ದ್ರ ವಾತಾವರಣದಲ್ಲಿ ಸುಲಭವಾಗಿ ಹೊಂದಿಕೊಂಡು ಧರಿಸಲು ಆರಾಮದಾಯಕವಾಗಿರುತ್ತದೆ.
- ಇವುಗಳು ಉತ್ತಮ ಗುಣಮಟ್ಟ ಮತ್ತು ಬಾಳಿಕೆಗೆ ಹೆಸರುವಾಸಿಯಾಗಿದೆ.
- ಟಿಶ್ಯು ರೇಷ್ಮೆ ಸೀರೆಗಳು ವಿವಿಧ ಬಣ್ಣಗಳು ಮತ್ತು ವಿನ್ಯಾಸಗಳಲ್ಲಿ ಲಭ್ಯವಿದ್ದು, ಯಾವುದೇ ಸಂದರ್ಭಕ್ಕೂ ಅವು ಬಹುಮುಖ ಆಯ್ಕೆಯಾಗುತ್ತಿವೆ. ಇವುಗಳನ್ನು ಸಂದರ್ಭಕ್ಕೆ ತಕ್ಕಂತೆ ಧರಿಸಬಹುದು.

## ಈ ಟಿಪ್ಸ್ ಪಾಲಿಸಿ

- ಟಿಶ್ಯು ಸೀರೆಯೇ ಗ್ರ್ಯಾಂಡ್ ಲುಕ್ ನೀಡುವುದರಿಂದ ಅದಕ್ಕೆ ಹೊಂದಿಕೆಯಾಗುವ ಆಭರಣಗಳನ್ನು ಆರಿಸಿಕೊಳ್ಳಿ. ಅದರಲ್ಲೂ ಟೆಂಪಲ್ ವಿನ್ಯಾಸದ ಆಭರಣಗಳು ಹೆಚ್ಚು ಹೊಂದಿಕೆಯಾಗುತ್ತವೆ. ದೊಡ್ಡ ಪೆಂಡೆಂಟ್ ಇರುವ ಹಾರದ ಜೊತೆ ಜುಮ್ಕಾಗಳನ್ನು ಧರಿಸಬಹುದು. ಇದರ ಜೊತೆಗೆ ಎರಡು ಅಥವಾ ಮೂರು ಎಳೆಯ ಮಾಟಿ ಚೆನ್ನಾಗಿ ಒಪ್ಪುತ್ತದೆ. ಹಾಗೇ ಸೀರೆಗೆ ಮ್ಯಾಚ್ ಆಗುವ ಬಂಗಾರದ ಬಳೆಗಳನ್ನು ಧರಿಸಬಹುದು.
- ಸೀರೆಯ ಬಣ್ಣ ಮತ್ತು ವಿನ್ಯಾಸಕ್ಕೆ ಹೊಂದಿಕೆಯಾಗುವ ಹೀಲ್ಸ್ ಅಥವಾ ಸ್ಯಾಂಡಲ್‌ಗಳನ್ನು ಧರಿಸಿ. ಸೀರೆಯ ಅಂಚು ದೊಡ್ಡದಾಗಿದ್ದರೆ ಅದು ಎದ್ದು ಕಾಣುವಂತೆ ಹೀಲ್ಸ್ ಧರಿಸುವುದು ಒಳ್ಳೆಯದು.
- ಸಾಂಪ್ರದಾಯಿಕ ಸಮಾರಂಭಕ್ಕೆ ಹೋಗುವುದಾದರೆ ನಿಮ್ಮ ಮುಖಕ್ಕೆ ತಕ್ಕನಾದ ಬಿಂದಿ ಒಳ್ಳೆಯದು.
- ಹೆವಿ ಮೇಕಪ್ ಅವಶ್ಯಕತೆ ಇಲ್ಲ.
- ಸರಳವಾದ ಕೇಶ ವಿನ್ಯಾಸವಿದ್ದರೆ ಒಳ್ಳೆಯದು. ಬನ್ ಅಥವಾ ಜಡೆ ಸೀರೆಯ ಸೊಬಗು ಮತ್ತು ಸರಳತೆಯನ್ನು ಹೆಚ್ಚಿಸುತ್ತದೆ.
- ಸೀರೆಯ ಬಣ್ಣ ಮತ್ತು ವಿನ್ಯಾಸಕ್ಕೆ ಪೂರಕವಾದ ಕ್ಲಚ್ ಅಥವಾ ಪೋಟ್ಲಿ ಬ್ಯಾಗ್ ಅನ್ನು ತೆಗೆದುಕೊಂಡು ಹೋಗುವುದು ಒಳ್ಳೆಯದು.